ಪಿ.ಎನ್. ಶ್ರೀವತ್ಸ, ಬೆಂಗಳೂರು

*ಅಕಸ್ಮಾತ್ ಅಗ್ನಿಶಾಮಕದಳದಲ್ಲೂ ಹೆಣ್ಣು ಇದ್ದಿದ್ದರೆ...?*



ಬೇಕೆಂದೇ ಮನೆಗೆ ಬೆಂಕಿ ಹಚ್ಚಿಕೊಳ್ಳುವ ಪಡ್ಡೆಗಳು ಹೆಚ್ಚುತ್ತಿದ್ದರು!

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ

*ನಿಮ್ಮ ಉತ್ತರಗಳನ್ನು ನೋಡುವಾಗ ನೀವು ಒಬ್ಬ ಪುರುಷದ್ವೇಷಿ ಸ್ತ್ರೀ ಸಾಹಿತಿ ಎಂದು ನನ್ನ ಅನಿಸಿಕೆ. ಏನಂತೀರಿ?*

ಕರೆಕ್ಟ್. ಸಮಾನಮನಸ್ಕರು ಮಾತ್ರ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಸಾಧ್ಯ!

ಡೈರಿ ವಿಶ್ವನಾಥ್, ಬೆಂಗಳೂರು

*ಬೇತಾಳರು ಇದ್ದಾರಾ?*

ಇದ್ದಾರಲ್ಲಾ; ಈಗ ಅವರನ್ನು ಟೆಲಿಮಾರ್ಕೆಟಿಂಗ್ ಮಂದಿ ಎಂದು ಕರೆಯುತ್ತಾರಷ್ಟೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಒಳ್ಳೆಯ ರಿಮೋಟ್ ಕಂಟ್ರೋಲ್ ಎಲ್ಲಿ ದೊರಕುತ್ತದೆ ರಾಂಜೀ?*



ಇರುವುದೇ ಒಂದು. ಇಟಲಿ ಬ್ರಾಂಡ್ ರಿಮೋಟ್ ಕಂಟ್ರೋಲ್. ದೆಹಲಿಯಲ್ಲಿ ದೊರಕುತ್ತದೆ!

ಆರ್. ಮಧುಸೂದನ್, ಹಾಸನ

*ಡಯಾಬಿಟಿಸ್ ಇರುವವರು ಹೆಣ್ಣಿನ ಅಧರದ ಸಿಹಿಯನ್ನು ಸವಿಯಬಹುದೆ?*

ಆ ಹೆಣ್ಣು ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ!

ಬೇಲೂರ್ ನಾಗೇಶ್, ಹಾಸನ

*ಸನ್ಮಾನಿತರನ್ನೇ ಮತ್ತೆ ಮತ್ತೆ ಕರೆದು ಸನ್ಮಾನಿಸುತ್ತಾರಲ್ಲಾ, ಯಾಕೆ?*

ಮೋಹ, ದಾಹ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಉಪ್ಪು ನೀರಿಗೆ, ಹುಡುಗರ ಮನಸ್ಸು ಹುಡುಗಿಯರಿಗೆ ಕರಗಲು ಕಾರಣವೇನು?*

ಲವಣದಲ್ಲಿ ಲವ್ ಇದೆ, ಹುಡುಗನಲ್ಲಿ ಲವ್ ಇದೆ. ಲವ್ ಇರುವೆಡೆಯೆಲ್ಲಾ ಕರಗುವಿಕೆ ಇದ್ದೇ ಇದೆ!

ನವಿರವಿ, ಬಾಳೆಹೊನ್ನೂರು

*ಗಣೇಶ ಚಂದ್ರನಿಗೆ ಶಾಪ ಕೊಡುವ ಬದಲು ಸೂರ್ಯನಿಗೆ ಶಾಪ ಕೊಟ್ಟಿದ್ದಿದ್ದರೆ?*

ಚಂದ್ರ ಥಂಡಿಯಾದ್ದರಿಂದ ಶಾಪ ಗಟ್ಟಿಯಾಯಿತು; ಸೂರ್ಯನಿಗೆ ಕೊಟ್ಟಿದ್ದಿದ್ದರೆ ಶಾಪ ಕರಗಿಹೋಗುತ್ತಿತ್ತು!

ಎಂ.ಎನ್. ಸೋಮಶೇಖರ್, ಮೈಸೂರು

*ರುಚಿರುಚಿಯಾದ ಅಡುಗೆ ಮಾಡುವುದರಲ್ಲಿ ಹೆಂಗಸರಿಗಿಂತ ಗಂಡಸರೇ ಅಧಿಕ ನಿಷ್ಣಾತರು. ಏಕೆ?*

ಅಮ್ಮಾವ್ರ **mall** ಗುಣ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಅಳಿಯನಾಗುವವನ ಪಾದಗಳನ್ನು ಮಾವನಾಗುವವನೇ ಏಕೆ ತೊಳೆಯಬೇಕು ರಾಮ್?*

ಅವನ ಕಾಲು ತೊಳೆದರೆ ಇವನು ತಲೆ ತೊಳೆದುಕೊಂಡಂತಾಗುವುದಂತೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಕರೆಗಂಟೆ ಹೊಡೆದರೆ ಬಾಗಿಲು ತೆರೆಯುತ್ತದೆ. ಕಾಲನು ಬಂದು ಕರೆಗಂಟೆ ಹೊಡೆದರೆ?*

ನರ್ಸಿಂಗ್‌ಹೋಂನ ಐಸಿಯು ಬಾಗಿಲು, ನಂತರ ಡೆಡ್ ವಾರ್ಡ್ ಬಾಗಿಲು ತೆರೆಯುತ್ತವೆ!

ಜಿ.ಹೆಚ್. ನಾಯ್ಕ, ಹೊನ್ನಾವರ

*ಮೋಡ ಕರಗಿದರೆ ಮಳೆಯಾಗುತ್ತದೆ. ಹೃದಯ ಕರಗಿದರೆ?*

ಸುರಿಮಳೆಯಾಗುತ್ತದೆ – ಬೇಡಿಕೆಗಳದು!

ಎಸ್.ಎಂ. ಶಿವಶಂಕರ್, ಮೈಸೂರು

*ಶತ್ರುವಿಗೂ, ಹಿತಶತ್ರುವಿಗೂ ಇರುವ ವ್ಯತ್ಯಾಸವೇನು?*

ಶತ್ರು ಗುಂಡು ಸಿಡಿಸುತ್ತಾನೆ, ಹಿತಶತ್ರು ಗುಂಡು ಕುಡಿಸುತ್ತಾನೆ!

## ಬಹುಮಾನಿತ ಪ್ರಶ್ನೆ

ಪಿ.ಜಿ. ರಾಘವೇಂದ್ರ, ಮೈಸೂರು

*ತಾಯಿಯೇ ದೇವರು. ಹಾಗಾದರೆ ತಂದೆ...?*

ಮೊದಮೊದಲು ಪೂಜಾರಿ, ನಂತರ ದೇಗುಲದ ಸಿಪಾಯಿ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ

*ಜೇಡನಿಗೂ, ಜಿಡ್ಡು ರಾಜಕಾರಣಿಗೂ ಯಾರೋ ಹೋಲಿಕೆ ಮಾಡಿದ್ದರು. ಅದು ಹೇಗೆ?*

ಬಲೆಗೆ ಬಿದ್ದರೆ ಸಂಪೂರ್ಣವಾಗಿ ಹೀರಿಬಿಡುವ ಗುಣ!

ಗಣೇಶ ಎಂ. ಪೈ, ಚಿಕ್ಕಮಗಳೂರು

*ಟಿ.ವಿ.ಯಿಂದ ನಾವು ಏನನ್ನು ಕಳೆದುಕೊಂಡಿದ್ದೇವೆ?*

ಬುದ್ಧಿ!

ಎಂ.ಎ. ರುಕ್ಮಿಣಿ, ಮೊಬೈಲ್

*ಮಹಾಭಾರತದಲ್ಲಿ ದುರ್ಯೋಧನನು ದ್ರೌಪದಿಗೆ ವಸ್ತ್ರಾಭರಣಗಳನ್ನು ಮಾಡಿಸಿದನು ಎಂದು ಉತ್ತರಿಸುವ ವಿದ್ಯಾರ್ಥಿಗೆ ನಿಮ್ಮ ಸಲಹೆ?*



ವೆರಿಗುಡ್! ಹೀಗೇ ಮುಂದುವರಿದರೆ ಕನಿಷ್ಠವೆಂದರೂ ರಾಜ್ಯಮಟ್ಟದ ಬುದ್ಧಿಜೀವಿ ಆಗುತ್ತೀಯೆ!

ಎಸ್.ಜಿ. ಕರನಂದಿ, ಹುನಗುಂದ

*ತ್ರಿಕಾಲಜ್ಞಾನಿಗಳು ಅಂದರೆ... ಇದಕ್ಕೂ ಉದಾಹರಣೆ ಇದೆಯಾ ಸ್ವಾಮಿ?*

ಖಂಡಿತ. ಟ್ರೈಪಾಡ್ (3 ಕಾಲಿನ ಸ್ಟ್ಯಾಂಡ್) ಬಳಕೆಯ ಜ್ಞಾನ ಇರುವ ಫೊಟೋಗ್ರಾಫರ್, ವಿಡಿಯೋಗ್ರಾಫರ್, ಸರ್ವೇಯರ್......!

ಪೇಂಟರ್ ಪಾಪು, ಚಾಮರಾಜನಗರ

*ನಿಜವಾಗಿಯೂ ಬಾರ್ ಗಂಡುಮಕ್ಕಳ ತವರಂತೆ. ಹೌದಾ?*

ತವರುಮನೆ ನಶೆ ಬರಿಸುವುದೇನು? ಕ್ವಾನ್ಸರ್? ಅವರವರ ಯೋಗ್ಯತೆಗೆ ತಕ್ಕಂತೆ ಅವರವರ ಆಲೋಚನೆಯಷ್ಟೆ!

■ ರಾಮ್